**ಸಾಕ್ಷಿಗೆ ದಿನಾಂಕ 23.02.2024 ರಂದು ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

2015-2016 ರಲ್ಲಿ ನನ್ನ ಗಂಡನಿಗೆ ಯಾವುದೇ ಆದಾಯ ಇರಲಿಲ್ಲ. 2016 ರಿಂದ 2022 ರವರೆಗೂ ನನ್ನ ಅಳಿಯ ಮತ್ತು ಮಗಳು ಚೆನ್ನಾಗಿದ್ದರು ಎಂದರೆ ಸರಿಯಲ್ಲ. ಮದುವೆಯ ಮಾತುಕತೆ ಸಮಯದಲ್ಲಿ ಮೂರ್ತಿ, ನರಸಿಂಹ, ರಾಮಕೃಷ್ಣ, ಪಾಪೇಗೌಡ, ಮುನಿರಾಜಪ್ಪರವರು ಹಾಜರಿದ್ದರು. ನಾನು ಹೇಳಿರುವ ಹಾಗೆ ಯಾವುದೇ ಜಮೀನನ್ನು ಮಾರಾಟ ಮಾಡಿ ಮಗಳ ಮದುವೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ. 35/4 ನನ್ನ ಮಾವನ ಹೆಸರಿನಲ್ಲಿತ್ತು. 2022 ರಲ್ಲಿ ವಿಭಾಗ ಮಾಡಿಕೊಂಡು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ರೂ. 5,00,000/- ಹಣ ತೆಗೆದುಕೊಂಡು ಬಾ ಎಂದು ಯಾವ ವರ್ಷ ಕೇಳಿರುತ್ತಾರೆಂದು ನನಗೆ ಗೊತ್ತಿಲ್ಲ. ಚಾಸಾ-1 ರವರಿಗೆ ದೈಹಿಕವಾಗಿ ಹಾಗೂ ಮಾನಸಿಕವಾಗಿ ಕಿರುಕುಳ ಕೊಟ್ಟಿರುವ ಬಗ್ಗೆ ಬೆಂಗಳೂರಿನಲ್ಲಿ ದೂರು ದಾಖಲಿಸಿಲ್ಲ. ಆರೋಪಿತರು ಹಣಕ್ಕಾಗಿ ಯಾವುದೇ ರೀತಿಯ ಬೇಡಿಕೆ ಇಟ್ಟಿರುವುದಿಲ್ಲ ಮತ್ತು ನಮಗೆ ಹಣ ಕೊಡುವ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ.

ನಾನು ಆರೋಪಿಗೆ ರೂ. 1,00,000/- ಹಣ ಕೊಟ್ಟಿರಲಿಲ್ಲ ಮತ್ತು ನಮಗೆ ಹಣ ಕೊಡುವ ಸಾಮರ್ಥ್ಯ ಇರಲಿಲ್ಲ ಎಂದರೆ ರೂ. 50,000/- ಫೈನಾನ್ಸ್ ನಿಂದ ಮತ್ತು ರೂ. 50,000/- ಸಾಲ ಪಡೆದುಕೊಂಡು ಕೊಟ್ಟಿರುತ್ತಾರೆ. ಯಾವ ಫೈನಾನ್ಸ್ ಎಂದು ಗೊತ್ತಿಲ್ಲ. ಯಾವ ವರ್ಷದಲ್ಲಿ ಆರೋಪಿಗೆ ಹಣ ಕೊಟ್ಟಿರುತ್ತೇವೆ ಎಂದು ಗೊತ್ತಿಲ್ಲ. ನಾನು ಆ ರೀತಿ ಫೈನಾನ್ಸ್ ಇಂದ ಹಣ ಪಡೆದುಕೊಂಡು ಆರೋಪಿಗೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಮದುವೆ ಮಾತುಕತೆ ಸಮಯದಲ್ಲಿ ಆರೋಪಿ-1 ರವರಿಗೆ ವಿಚ್ಛೇದನ ಆಗಿರುವ ವಿಚಾರ ಮೊದಲೇ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಮರೆಮಾಚಿ ವಿವಾಹವಾಗಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 28.04.2015 ರಂದು ಒಪ್ಪಿಗೆ ಪಡೆದುಕೊಂಡು ಮಗಳನ್ನು ಕರೆದುಕೊಂಡು ಬಂದಿರುತ್ತೇವೆ ಎಂದು ಹೇಳಿರುತ್ತೇವೆ. ಆ ಸಮಯದಲ್ಲಿ ಆರೋಪಿ ಮತ್ತು ಆರೋಪಿಯ ತಂದೆ ಮನೆಯಲ್ಲಿದ್ದರು.

**CC No 43/2022**
**PW.3**

ದಿಃ 28.11.2015 ಕ್ಕೂ ಮೊದಲು ನನ್ನ ಮಗಳು ವಾಪಸ್ಸು ಬಂದಿರುತ್ತಾರೆ ಎಂದರೆ ಸರಿಯಲ್ಲ. ಜೀವನಾಂಶ ಅರ್ಜಿಯಲ್ಲಿ ಆರೋಪಿ ಅರ್ಜಿದಾರರನ್ನು ಕರೆದುಕೊಂಡು ಹೋಗಲು ಸಿದ್ಧನಿರುತ್ತಾನೆಂದು ಹೇಳಿರುತ್ತಾನೆ ಆದರೆ ನಾನೇ ಚಾಸಾ-1 ರವರನ್ನು ಕಳುಹಿಸದೇ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ಎಸ್.ಎಸ್.ಎಲ್.ಸಿ, ಪಿ.ಯು.ಸಿ ಅಂಕಪಟ್ಟಿ ಮತ್ತು ಇತರೆ ದಾಖಲೆಗಳನ್ನು ಚಾಸಾ-1 ರವರೇ ತೆಗೆದುಕೊಂಡು ಹೋಗಿದ್ದು, ಆರೋಪಿಯ ಮನೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. 2021 ರಿಂದ ನನ್ನ ಮಗಳು ವ್ಯಾಸಂಗ ಮಾಡುತ್ತಿದ್ದರು. ದೂರು ಕೊಟ್ಟ ಸಮಯದಲ್ಲಿ ಚಾಸಾ-1 ರವರು ನಮ್ಮ ಮನೆಯಲ್ಲಿದ್ದರು ಎಂದರೆ ಸರಿಯಲ್ಲ. ಯಾವ ವರ್ಷ ಯಾವ ದಿನಾಂಕದಂದು ದೂರು ಕೊಟ್ಟಿರುತ್ತೇವೆ ಎಂದು ಗೊತ್ತಿಲ್ಲ. ಆರೋಪಿ ನಮ್ಮ ಮನೆಗೆ ಬಂದು ಚಾಸಾ-1 ರವರನ್ನು ಹೊಡೆದಿರುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ವಿಭಾಗ ಮಾಡಿಕೊಂಡು ಮದುವೆಗಾಗಿ ಯಾವುದೇ ಜಮೀನನ್ನು ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ಈ ವಿಚಾರವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**